ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 101/2017

ಪಿ. ಡಬ್ಲ್ಯುಃ 02
ಸಿ. ಡಬ್ಲ್ಯುಃ 02

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಘು |
| ತಂದೆ/ಪತಿಯ ಹೆಸರು | ಃ | ಪುಟ್ಟರಾಮು |
| ವಯಸ್ಸು | ಃ | 45 ವರ್ಷ |
| ವೃತ್ತಿ | ಃ | ಮಣ್ಣಿನ ಕೆಲಸ |
| ವಾಸ | ಃ | ಕೆ.ಆರ್.ಸಾಗರ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 12.09.2023

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಚಾಸಾ.1 ನನ್ನ ತಮ್ಮ, ಚಾಸಾ.3 ಮತ್ತು 4 ಗೊತ್ತು. ಆರೋಪಿತರು ಗೊತ್ತು.

ದಿಃ 26.04.2016 ರಂದು ಸಂಜೆ 05.30-06.00 ಸಮಯದಲ್ಲಿ ನಾನು ಕೆ.ಆರ್.ಎಸ್ ಗ್ರಾಮದ ಹತ್ತಿರವಿರುವ ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೇನು. ನನ್ನ ತಮ್ಮ ನನ್ನ ಜಮೀನಿಗೆ ಬರಲು ಗಾಡಿ ಜಾಡಿನಲ್ಲಿ ಬರುತ್ತಿದ್ದನು. ಅಲ್ಲಿ ನನ್ನ ತಮ್ಮನನ್ನು ಆರೋಪಿತರು ಅಡ್ಡಗಟ್ಟಿ ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ನಾನು ಅಲ್ಲಿಗೆ ಹೋಗಿ ಏಕೆ ನನ್ನ ತಮ್ಮನಿಗೆ ಬೈಯುತ್ತಿದ್ದೀರಿ ಎಂದು ಕೇಳಿದೆನು. ಆಗ ಚಂದ್ರು ಮತ್ತು ಗೌಡಯ್ಯ ನನಗೆ ದೊಣ್ಣೆಯಿಂದ ಹೊಡೆಯಲು ಬಂದರು. ಅದನ್ನು ತಪ್ಪಿಸಲು ನನ್ನ ತಮ್ಮ ಬಂದಾಗ ಆತನ ಬಲಗೈಗೆ ಏಟಾಯಿತು. ಅಲ್ಲೇ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಈಶ್ವರ ಮತ್ತು ಸ್ವಾಮಿ ಜಗಳ ಬಿಡಿಸಿ ಕಳುಹಿಸಿದರು.

ಜಗಳ ಬಿಡಿಸಿದ ನಂತರ ಆರೋಪಿತರ ವಿರುದ್ದ ದೂರು ಕೊಡುವ ಸಲುವಾಗಿ ನಮ್ಮ ಗ್ರಾಮಕ್ಕೆ ಬಂದರು. ಗ್ರಾಮದಲ್ಲಿ ಹಿರಿಯರು ದೂರುಕೊಡುವುದು ಬೇಡ ಗ್ರಾಮದಲ್ಲಿಯೇ ಸರಿ ಮಾಡೋಣವೆಂದು ತಿಳಿಸಿದರು. ಮರುದಿನ ಬೆಳಿಗ್ಗೆ 10.30-11.00 ಸಮಯದಲಿ ಗೌಡಯ್ಯ ಮತ್ತು ಚಂದ್ರು ನಮ್ಮ ಮನೆಯ ಹತ್ತಿರ ಬಂದು ಗಲಾಟೆ ಮಾಡಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ಗಲಾಟೆ ಸಂಬಂಧ ನನ್ನ ತಮ್ಮ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ನಾನು ಗಲಾಟೆ ಸಂಬಂಧ ನನ್ನ ಹೇಳಿಕೆ ನೀಡಿದ್ದೇನೆ.

ನನ್ನ ತಮ್ಮನ ಮೇಲೆ ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾಲು.1 ಎಂದು ಗುರುತಿಸಲಾಗಿದೆ.

ನನ್ನ ಮತ್ತು ನನ್ನ ತಮ್ಮನ ವಿರುದ್ದ ಗಲಾಟೆ ಮಾಡಿ ಹಲ್ಲೆ ಮಾಡಿ, ಅವಾಚ್ಯ ಬೈದು ಪ್ರಾಣ ಬೆದರಿಕೆ ಹಾಕಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನುನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>**

ನಮ್ಮ ಜಮೀನು ಈ ಮೊದಲು ನನ್ನ ತಂದೆ ಖರೀದಿ ಮಾಡಿದ್ದರು ಎಂದರೆ ಸರಿ. ಆರೋಪಿತರ ಜಮೀನು ನಮ್ಮ ಜಮೀನಿಗೆ ಲಗತ್ತಾಗಿದೆ ಎಂದರೆ ಸರಿ. ಸದರಿ ಜಮೀನು ಆರೋಪಿತರು ಕ್ರಯಕ್ಕೆ ಪಡೆದಿರುವ ಜಮೀನು ಎಂದರೆ ಸರಿ. ನನ್ನ ತಂದೆಗೆ ಹಾಗೂ ಆರೋಪಿತರಿಗೆ ಜಮೀನು ಮಾರಾಟ ಮಾಡಿರುವ ವ್ಯಕ್ತಿ ಒಬ್ಬರೆ ಎಂದರೆ ಸರಿ. ಆರೋಪಿತರು ಖರೀದಿ ಮಾಡಿದ ಸ್ವತ್ತನ್ನು ಅವರಿಗೂ ಮೊದಲು ನನಗೆ ಕೊಡಬೇಕೆಂದು ನಾವು ಆರೋಪಿತರ ಪೂರ್ವ ಮಾಲೀಕರ ಹತ್ತಿರ ಕೇಳಿದೆವು ಎಂದರೆ ಸುಳ್ಳು.

ಆರೋಪಿತರು ನನ್ನ ಮತ್ತು ನನ್ನ ಕುಟುಂಬದವರ ವಿರುದ್ದ ದಿಃ 26.04.2016 ರಂದು ದೂರನ್ನು ನೀಡಿದ್ದರು ಅದರಂತೆ ನಮ್ಮ ವಿರುದ್ದ ಪ್ರಕರಣ ಸಹ ದಾಖಲಾಗಿತ್ತು ಎಂದರೆ ಸರಿ. ನಾವು ಖರೀದಿ ಮಾಡಬೇಕಾಗಿದ್ದ ಸ್ವತ್ತನ್ನು ಆರೋಪಿತರು ಖರೀದಿ ಮಾಡಿದ ಕಾರಣ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿದ ಕಾರಣದಿಂದ ನಮ್ಮ ವಿರುದ್ದ ಆರೋಪಿತರು ಕೇಸು ದಾಖಲು ಮಾಡಿದ್ದರು ಎಂದರೆ ಸುಳ್ಳು. ಗಲಾಟೆ ಮಾಡಿದ ಸಮಯದಲ್ಲಿ ಅಕ್ಕ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ರಸ್ತೆಯ ಕಾಲು ದಾರಿ ಆರೋಪಿತರ ಜಮೀನಿಗೆ ಕೊನೆಯಾಗುತ್ತದೆ ಎಂದರೆ ಸರಿ. ಪೆಟ್ಟಾಗಿದ್ದ ನನ್ನ ತಮ್ಮನ ಕೈನಲ್ಲಿ ರಕ್ತ ಬರುತ್ತಿತ್ತು. ಸದರಿ ರಕ್ತ ನನ್ನ ತಮ್ಮ ತೊಟ್ಟಿದ್ದ ಬಟ್ಟೆಗೆ ಅಂಟಿತ್ತು. ಸಾಮಾನ್ಯವಾಗಿ ಮು.ಮಾಲು.1 ರ ರೀತಿಯ ದೊಣ್ಣೆಗಳು ರೈತರ ಮನೆಯಲ್ಲಿ ಭತ್ತ ಬಡಿಯಲು ಉಪಯೋಗಿಸುತ್ತಾರೆ ಎಂದರೆ ಸರಿ. ಮು.ಮಾಲು.1 ರಿಂದ ನನ್ನಗಾಗಲಿ ಅಥವಾ ನನ್ನ ತಮ್ಮನಿಗಾಗಲಿ ಹೊಡೆದಿಲ್ಲ ಎಂದರೆ ಸರಿಯಲ್ಲ.

ನಮ್ಮ ವಿರುದ್ದ ದಾಖಲು ಮಾಡಲಾದ ದೂರಿನಿಂದ ತಪ್ಪಿಸಿಕೊಳ್ಳಲು ಆರೋಪಿತರ ವಿರುದ್ದ ಯಾವುದೇ ಗಲಾಟೆ ನಡೆಯದಿದ್ದರೂ ಸುಳ್ಳು ದಿನಾಂಕ ನಮೂದಿಸಿ ಕೇಸು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

ಆರೋಪಿತರು ತಮ್ಮ ಜಮೀನಿನಲ್ಲಿ ಭತ್ತ ಬೆಳೆದಿದ್ದು ಅವರ ಜಮೀನಿನಲ್ಲಿ ನಾವು ಹೋದ ಕಾರಣ ಅವರ ಭತ್ತದ ಬೆಳೆಗೆ ಹಾನಿಯಾಗಿದ್ದು ಅದನ್ನು ಕೇಳಿದ ಕಾರಣಕ್ಕೆ ಅವರ ವಿರುದ್ದ ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.